ಬೆಳೆಯುತ್ತಿರುವುದರಿಂದ, ಒಂದು ವನಸ್ಪತಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇಂಥ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲು ಯಾರಾದರೂ ಮುಂದೆ ಬಂದರೆ ಅವರಿಗೆ ಎಲ್ಲಾ ರೀತಿಯ ಸಹಾಯ ಸೌಕರ್ಯಗಳನ್ನೂ ಕೊಡಲಿಕ್ಕೆ ಸರ್ಕಾರದವರು ಮುಂದೆ ಬರುತ್ತಾರೆಂದು ಹೇಳುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಅದಕ್ಕೋಸ್ಕರವಾಗಿಯೇ `ಮಾರ್ಕೆಟಿಂಗ್ ಫೆಡರೇಷನ್ ಇರುವುದರಿಂದ ವಾಣಿಜ್ಯೋದ್ಯಮಗಳನ್ನು ಪ್ರಾರಂಭಿಸಲಿಕ್ಕೆ ಏತಕ್ಕೆ ಸರ್ಕಾರದವರು ಆದೇಶವನ್ನು ಕೊಡ ಬಾರದೆಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರ ಆದೇಶ ಕೊಡುವುದಕ್ಕಿಂತ ಸಲಹೆಯನ್ನು ಕೊಡುತ್ತದೆ. ಸಂಸ್ಥೆಯವರು ಒಳ್ಳೆಯ ಸೂಚನೆಗಳನ್ನು ಕೊಟ್ಟರೆ, ಸರ್ಕಾರದವರು ಸಲಹೆಗಳನ್ನು ಕೊಡುತ್ತಾರೆಂದು ಹೇಳುತ್ತೇನೆ.

ವಿಷಯ : ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ಮಂಡಲಿಯವರಿಂದ ಕೈಗಾರಿಕಾ ಘಟಕಗಳ ಸ್ಥಾಪನೆ.

ಪ್ರ. 272 (45) ಶ್ರೀ ಹೆಚ್. ಎಸ್. ಮುರಳೀಧರ (ಗಂಗಾವತಿ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ಮಂಡಲಿಯವರು ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಐದು ಕೈಗಾರಿಕಾ ಘಟಕಗಳು ಇರಬೇಕೆಂದು ನಿರ್ಣಯ ತೆಗೆದುಕೊಂಡಿದ್ದಾರೆಂಬುದು ನಿಜವೇ ;

(ಆ) ಹಾಗಿದ್ದಲ್ಲಿ ಇಂತಹ ಕೈಗಾರಿಕಾ ಘಟಕಗಳನ್ನು ಗಂಗಾವತಿ ಕ್ಷೇತ್ರದಲ್ಲಿ ಪ್ರಾರಂಭಿಸಲು ಸರ್ಕಾರ ದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ ;

(ಇ) ಇಂತಹ ಕೈಗಾರಿಕಾ ಘಟಕಗಳು ಯಾವುವು ಮತ್ತು ಅವುಗಳ ವಿವರಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) ಇಲ್ಲ.

(ಆ) (ಇ) ಪ್ರಶ್ನೆ "ಅ" ಇದಕ್ಕೆ ಕೊಟ್ಟ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಹೆಚ್. ಎಸ್. ಮುರಳೀಧರ.—ಮಾನ್ಯ ಮಂತ್ರಿಗಳು ಕೈಗಾರಿಕಾ ಕೇಂದ್ರಗಳನ್ನು ಸ್ಥಾಪನೆ ಮಾಡುವ ಬಗ್ಗೆ ಶೀಘ್ರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳತಕ್ಕಂಥದ್ದು ಬಹಳ ಅವಶ್ಯಕತೆ ಇದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಗಂಗಾವತಿಯಲ್ಲಿ ಇಂಡಸ್ಟ್ರಿಯಲ್ ಯೂನಿಟ್‌ಗಳನ್ನು ಪ್ರಾರಂಭ ಮಾಡಲು ಎಲ್ಲಾ ಸೌಲಭ್ಯಗಳು ದೊರೆಯುವುದರಿಂದ ಅಲ್ಲಿ ಇಂಡಸ್ಟ್ರಿಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದವರು ಈಗಾಗಲೇ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಪ್ರಾರಂಭ ಮಾಡುವ ಬಗ್ಗೆ ಜಮೀನನ್ನು ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುತ್ತಿದ್ದಾರೆ. ಆದ್ದರಿಂದ ಅಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಆಗತಕ್ಕಂಥಾದ್ದು ಇದೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಅನೇಕ ಜಾಗಗಳಲ್ಲಿ ಕೈಗಾರಿಕಾ ಇಲಾಖೆಯ ವತಿಯಿಂದ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಅನೇಕ ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದೇವೆಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ಅದರಂತೆ ರೂರಲ್ ಏರಿಯಾದಲ್ಲಿ ಇಂಡಸ್ಟ್ರಿಯಲ್ ಸೆಕ್ಟಾರ್‌ಗಳನ್ನು ಸ್ಥಾಪನೆ ಮಾಡುವ ಕಾರ್ಯಕ್ರಮದಂತೆ ಯಾವ ಯಾವ ತಾಲ್ಲೂಕುಗಳಲ್ಲಿ ಇಂಡಸ್ಟ್ರಿಗಳನ್ನು ಸ್ಥಾಪನೆ ಮಾಡಲು ಯೋಚಿಸಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಯಚೂರು ಜಿಲ್ಲೆಗೆ ಸಂಬಂಧಪಟ್ಟಂತೆ ಗಂಗಾವತಿ, ಸಿಂಧಗಿ, ಲಿಂಗಸುಗೂರು ಇವೇ ಮುಂತಾದ ಕಡೆಗಳಲ್ಲಿ ಜಮೀನುಗಳನ್ನು ತೆಗೆದುಕೊಂಡು ಇಂಡಸ್ಟ್ರಿಗಳನ್ನು ಕೊಡತಕ್ಕಂಥ ಯೋಚನೆ ಮಾಡುತ್ತಿದ್ದೇವೆ.

ವಿಷಯ : ಪ್ರಾಂತೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ವಿಚಾರ.

ಪ್ರ. 273 (90) ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಸಾಗರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ರಾಜ್ಯದ ಯಾವುದಾದರೂ ಒಂದು ರಸ್ತೆಯನ್ನು ಪ್ರಾಂತೀಯ ಹೆದ್ದಾರಿ ಅಥವಾ ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನಾಗಿ ಪರಿವರ್ತಿಸಿಕೊಳ್ಳಲು ನಿಯಮಗಳೇನಾದರೂ ಇವೆಯೇ :

(ಆ) ಹಾಗಿದ್ದಲ್ಲಿ ಆ ನಿಯಮಗಳಾವುವು ;

(ಇ) ಪಾಂಡವಪುರ–ಕೃಷ್ಣರಾಜಪೇಟೆ ಮಾರ್ಗವಾಗಿ ಹಾದುಹೋಗುವ ಶ್ರೀ ರಂಗಪಟ್ಟಣ–ಚನ್ನರಾಯಪಟ್ಟಣ ರಸ್ತೆ (ಎಸ್.ಸಿ. ರೋಡು) ಯನ್ನು ಪ್ರಾಂತೀಯ ಹೆದ್ದಾರಿ ರಸ್ತೆಯೆಂದು ಸರ್ಕಾರದವರು ಘೋಷಿಸುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಯಾವುದೊಂದು ರಸ್ತೆಯನ್ನು ಪ್ರಾಂತೀಯ ಅಥವಾ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಹಲವು ಅಂಶಗಳನ್ನು ನಿಗದಿಪಡಿಸಲಾಗಿದೆ.

(ಆ) ಈ ಕೆಳಕಂಡ ನಿಗದಿ ಪಡಿಸಿದ ಅಂಶಗಳನ್ನು ಗಮನಿಸಬೇಕಾಗುತ್ತದೆ:

1. ಪ್ರಾಂತೀಯ ಹೆದ್ದಾರಿಯ ಕುರಿತು.
   (1) ರಸ್ತೆಯು ರಾಷ್ಟ್ರೀಯ ಹೆದ್ದಾರಿಗಳನ್ನು ಅಥವಾ ಅಕ್ಕಪಕ್ಕದ ರಾಜ್ಯಗಳ ಮುಖ್ಯ ರಸ್ತೆಗಳನ್ನು ಕೂಡಿಸುವಂತಿರಬೇಕು.
   (2) ರಾಜ್ಯದಲ್ಲಿನ ಜಿಲ್ಲಾ ಕೇಂದ್ರಗಳನ್ನು ಹಾಗೂ ಮುಖ್ಯ ನಗರಗಳನ್ನು ಕೂಡಿಸುವಂತಿರಬೇಕು.
   (3) ಮುಖ್ಯ ಜಿಲ್ಲಾ ಹೆದ್ದಾರಿಗಳನ್ನು ಕೂಡಿಸುವ ಸಾರಿಗೆ ಹಾಗೂ ಸಂಪರ್ಕದ ಮುಖ್ಯ ಸಾಧನವಾಗಿರಬೇಕು.
2. ರಾಷ್ಟ್ರೀಯ ಹೆದ್ದಾರಿಯ ಕುರಿತು.
   (1) ಅವು ರಾಷ್ಟ್ರದ ಉದ್ದ ಅಗಲದಲ್ಲೂ ಹಾದು ಹೋಗುವಂತಹ ಮುಖ್ಯ ಹೆದ್ದಾರಿಗಳಾಗಿರಬೇಕು.
   (2) ಅವು ವಿದೇಶೀಯ ಮುಖ್ಯ ಹೆದ್ದಾರಿಗಳನ್ನು ಸಂಪರ್ಕಿಸುವಂತಹ ಹೆದ್ದಾರಿಗಳಾಗಿರಬೇಕು.
   (3) ಅವು ರಾಜ್ಯದ ರಾಜಧಾನಿಗಳಿಗೆ ಸಂಪರ್ಕ ಹೊಂದಿರತಕ್ಕ ಹೆದ್ದಾರಿಗಳಾಗಿರಬೇಕು.
   (4) ಅವು ರಾಷ್ಟ್ರದ ಸಾರಿಗೆ ಸಂಪರ್ಕದ ಜಾಲದಲ್ಲಿ ಪ್ರಮುಖವಾಗಿರಬೇಕು.
   (5) ಅವು ಪ್ರಮುಖ ಬಂದರುಗಳು ಮತ್ತು ದೊಡ್ಡ ಕೈಗಾರಿಕಾ ಪಟ್ಟಣಗಳು ಅಥವಾ ಪ್ರವಾಸಿ ಕೇಂದ್ರಗಳನ್ನು ಸಂಪರ್ಕಿಸುವಂತಹುದಾಗಿರಬೇಕು, ಮತ್ತು
   (6) ಅವು ರಾಷ್ಟ್ರದ ಅಯಕಟ್ಟಿನ ಅವಶ್ಯಕತೆಗಳನ್ನು ಸಂಪರ್ಕಿಸುವಂತಹ ಹೆದ್ದಾರಿಗಳಾಗಿರಬೇಕು.

(ಇ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಅಧ್ಯಕ್ಷರೇ, ಪ್ರಾಂತೀಯ ಹೆದ್ದಾರಿಯನ್ನು ಕುರಿತು ನಿಯಮಾವಳಿಗಳನ್ನು ಮಾನ್ಯ ಸಚಿವರು ಹೇಳಿರುತ್ತಾರೆ. ಇದು ಸಂಪೂರ್ಣವಾಗಿ ಈ ಎಲ್ಲಾ ನಿಯಮಗಳಿಗೂ ಹೊಂದಾಣಿಕೆಯಾಗಿರುವುದರಿಂದ ಸರ್ಕಾರದವರು ಈ ರಸ್ತೆಯನ್ನು ಗಮನಕ್ಕೆ ತೆಗೆದುಕೊಂಡು ಪ್ರಾಂತೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಯೋಚಿಸುವರೇ ? ಮತ್ತು ಮೈಸೂರು ಪ್ರಮುಖ ಕೈಗಾರಿಕಾ ಕೇಂದ್ರವಾದ ಮೇಲೆ ಮತ್ತು ಪ್ರಮುಖ ವಾಣಿಜ್ಯೋದ್ಯಮ ಸ್ಥಳವಾದ ಮೇಲೆ ಬಾಂಬೆಗೆ ಸಂಪರ್ಕವನ್ನು ಕಲ್ಪಿಸತಕ್ಕಂಥ ಹೆದ್ದಾರಿಯಾಗಿರುವುದರಿಂದಲೂ ಮತ್ತು ಹಾಸನ, ಚನ್ನರಾರಯಪಟ್ಟಣಕ್ಕೆ ಸಂಪರ್ಕ ಕಲ್ಪಿಸುವುದರಿಂದಲೂ. ಬೆಂಗಳೂರು, ಮೈಸೂರು, ಶ್ರೀರಂಗಪಟ್ಟಣಕ್ಕೆ ಸಂಪರ್ಕವನ್ನು ಕಲ್ಪಿಸುವುದರಿಂದಲೂ, ಶ್ರೀರಂಗಪಟ್ಟಣ, ಚೆನ್ನರಾಯಪಟ್ಟಣದ ರಸ್ತೆಯನ್ನು ಪ್ರಾಂತೀಯ ಹೆದ್ದಾರಿಯನ್ನಾಗಿ ಮಾಡಲು ಈ ಎಲ್ಲ ಗುಣಗಳಿರುವುದರಿಂದ ಇದನ್ನು ಈ ರೀತಿಯಾಗಿ ಪರಿವರ್ತಿಸುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ರಾಜ್ಯದಲ್ಲಿ ಕೆಲವು ರಸ್ತೆಗಳನ್ನು ಪ್ರಾಂತೀಯ ಹೆದ್ದಾರಿಗಳನ್ನಾಗಿ ಮಾಡತಕ್ಕಂಥದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಇದರಲ್ಲಿ ನೀವು ಹೇಳಿರತಕ್ಕಂಥ ರಸ್ತೆಯೂ ಕೂಡ ಸೇರಿರುತ್ತದೆ. ಸುಮಾರು 1750 ಮೈಲಿಗಳಷ್ಟು ಪ್ರಾಂತೀಯ ಹೆದ್ದಾರಿಯನ್ನಾಗಿ ಮಾಡತಕ್ಕಂಥದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಅದನ್ನು ಶೀಘ್ರವಾಗಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲಾ ಹೆದ್ದಾರಿಗಳನ್ನು ಸೇರಿಸಲು ಆಗುವುದಿಲ್ಲ. ಮೈಸೂರನ್ನು ಮಾತ್ರ 1984–85 ನೇ ಸಾಲಿನಲ್ಲಿ ಸೇರಿಸಲಾಗುತ್ತದೆ. 1300 ರಿಂದ 1750 ಮೈಲಿಗಳವರೆಗೂ ಪ್ರಾಂತೀಯ ಹೆದ್ದಾರಿಯನ್ನಾಗಿ ಸ್ಪೇಟ್ ಹೈವೇ ಮಾಡತಕ್ಕಂಥದ್ದು ಸರ್ಕಾರದ ಗಮನದಲ್ಲಿದೆ. ಅದು ತಮ್ಮ ಊರ ಮೇಲೆಯೇ ಹೋಗುತ್ತದೆ. 1750 ಮೈಲಿಯಲ್ಲಿಯೇ ಈ ರಸ್ತೆಯು ಸೇರಿರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಹೆದ್ದಾರಿಯನ್ನು ಮಾಡತಕ್ಕಂಥ ವಿಚಾರದಲ್ಲಿ ಕೆಲವು ನಿಯಮಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ಎರಡೂ ಕೂಡ ಹಾಗೆಯೇ ನೀರಾವರಿ ಪ್ರದೇಶಗಳು ಎಲ್ಲೆಲ್ಲಿ ಇವೆ ಅಲ್ಲಿಂದ ಗಮನದಲ್ಲಿಡಬೇಕಾಗುತ್ತದೆ. ನವ ಮಂಗಳೂರು ಬಂದರಿಗೆ ಕನೆಕ್ಷನ್ ಕೊಡತಕ್ಕಂಥದ್ದು, ಇದು ಪ್ರತ್ಯೇಕವಾಗಿ ಕೋಸ್ಟಲ್ ಹೈವೇಗೆ ಅಂದರೆ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಇಲ್ಲಿಂದ, ಮತ್ತೆ ಮಲಪ್ರಭಾ, ಘಟಪ್ರಭಾ ಈ ಪ್ರದೇಶಗಳನ್ನು ಒಳಗೊಂಡಂತೆ ಆಹಾರಧಾನ್ಯ

ಗಳನ್ನು ಹೆಚ್ಚಿಚ್ಚು ಬೆಳೆಯತಕ್ಕಂಥ ಪ್ರದೇಶಗಳಿಂದ ಬಾಂಬೆ, ಪೂನಾ ಇಂಥ ಕಡೆಗೆ ಕನೆಕ್ಷನ್ ಕೊಡುವಂತೆ ಹೈವೇ ಮಾಡಿದರೆ ಒಳ್ಳೆಯದೆಂದು ಅಭಿಪ್ರಾಯಪಟ್ಟು ಹಿಂದೆ ಕೇಂದ್ರ ಸರ್ಕಾರಕ್ಕೆ ತಿಳಿಸಲಾಗಿತ್ತು. ಅದನ್ನು ರಾಜ್ಯ ಸರ್ಕಾರದವರು ಕೂಡಲೇ ಸಾಧ್ಯಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರು ಹೇಳತಕ್ಕಂಥ ವಿಷಯದ ಬಗ್ಗೆ ನಮ್ಮಲ್ಲಿರತಕ್ಕಂಥ ಮಾಹಿತಿಯ ಆಧಾರದ ಮೇಲೆ ಅವರು ಹೇಳುವ ರೀತಿ ಯಾವುದೂ ತಿಳಿದಿಲ್ಲ. ಅವರು ಬರೆದಿರತಕ್ಕಂಥ ವಿಷಯದ ಬಗ್ಗೆ ತಿಳಿಸಿದರೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ತರುತ್ತೇವೆ. ಆಗಸ್ಟ್ 1982 ರಲ್ಲಿ ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರದ ವತಿಯಿಂದ ಕೆಲವು ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಕೇಳಿಕೊಂಡಿದೆ. ಇತ್ತೀಚೆಗೆ ನಾವೂ ಕೂಡ ಕೇಂದ್ರ ಸರ್ಕಾರದ ಜೊತೆಯಲ್ಲಿ ಈ ದಿಸೆಯಲ್ಲಿ ಒತ್ತಾಯ ಮಾಡಿದ್ದೇವೆ. ಪ್ರತ್ಯೇಕವಾಗಿ ತಾವು ಸಚಿವರಾಗಿ ಇರತಕ್ಕಂಥ ಕಾಲದಲ್ಲಿ ವ್ಯವಹಾರವನ್ನು ನಡೆಸಿದ್ದರೆ ಅದರ ಮಾಹಿತಿಯನ್ನು ತರಿಸಿ ನೋಡಿ ಮತ್ತೆ ಕೇಂದ್ರಕ್ಕೆ ಒತ್ತಾಯ ತರುತ್ತೇವೆಂದು ಹೇಳುತ್ತೇನೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಈಗ ಕೇಂದ್ರ ಸರ್ಕಾರ ನ್ಯಾಷನಲ್ ಹೆವೇಗಳನ್ನು ಮೇಂಟೇನ್ ಮಾಡುವ ಸಲುವಾಗಿ ಮತ್ತು ಇಂಪ್ರೂ ಮಾಡುವ ಸಲುವಾಗಿ ಕೋಟ್ಯಾಂತರ ರೂಪಾಯಿಗಳನ್ನು ಅನೇಕ ರಾಜ್ಯಗಳಿಗೆ ಕೊಡುತ್ತಿದೆ. ಈ ಹಣವನ್ನು ಪಡೆಯಲು ನಿಯಮಾವಳಿಯ ಪ್ರಕಾರ ಕೆಲವು ಕಂಡೀಷನ್ಸ್‌ಗಳನ್ನು ಫುಲ್‌ಫಿಲ್ ಮಾಡದಿರುವ ಕಾರಣ ಕರ್ನಾಟಕ ಸರ್ಕಾರ ಈ ಹಣ ಪಡೆದಿಲ್ಲವೆಂಬ ಆಪಾದನೆ ಇದೆ. ಆದರೆ ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರಗಳು ಈ ಬಾಬಿನಿಂದ ಹೆಚ್ಚು ಹಣ ಪಡೆದಿವೆ. ಅದರೆ ನಮ್ಮ ಸರ್ಕಾರ ಪಡೆಯದಿರಲು ಕಾರಣವೇನೆಂಬುದನ್ನು ತಿಳಿಸಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—ಹೆಚ್ಚು ಹೆಚ್ಚು ರಸ್ತೆಗಳನ್ನು ತೆಗೆದುಕೊಳ್ಳುವ ಬಗ್ಗೆ ನಾವು ತಮಗೇ ಗೊತ್ತಿರುವಂತೆ ಕೇಂದ್ರ ಸರ್ಕಾರಕ್ಕೆ ಪದೇ ಪದೇ ಒತ್ತಾಯ ಮಾಡಿಕೊಂಡು ಬಂದಿದ್ದೇವೆ. ಆದರೆ ದುರ್ದೈವದ ಸಂಗತಿ ಎಂದರೆ ಈ ದಿಶೆಯಲ್ಲಿ ನಾವು ಹೆಚ್ಚು ಹಣವನ್ನು ಪಡೆಯಲು ಸಾಧ್ಯವಾಗಿಲ್ಲ. ನಮ್ಮ ರಾಜ್ಯದಲ್ಲಿಯೇ ಅತ್ಯಂತ ಕಡಿಮೆ ಪ್ರಮಾಣದ ಅಂದರೆ 10·25 ಪರ್ಸೆಂಟ್‌ನಷ್ಟು ಮಾತ್ರ ರಾಷ್ಟ್ರೀಯ ಹೆದ್ದಾರಿ ಇರುವುದು. ಆದ್ದರಿಂದ ಹೊಸದಾಗಿ 8 ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಈ ಹಿಂದಿನ ಸರ್ಕಾರ ಕೂಡ ಕೇಂದ್ರಕ್ಕೆ ಶಿಫಾರಸ್ ಮಾಡಿತ್ತು, ನಾವೂ ಸಹ ಮಾಡಿದ್ದೇವೆ. ಆದರೆ ಅವರಿಂದ ಇನ್ನೂ ಒಪ್ಪಿಗೆ ಬಂದಿಲ್ಲ. ಸೆಂಟ್ರಲ್ ರೋಡ್ ಫಂಡ್‌ನಿಂದ ಕೆಲವು ಸೇತುವೆಗಳನ್ನು ತೆಗೆದುಕೊಳ್ಳಬೇಕೆಂದು ನಾವು ಕೇಳಿದ್ದೇವೆ. ಇದಕ್ಕೂ ಸಹ ಕೇಂದ್ರದ ಕ್ಲಿಯರೆನ್ಸ್ ಸಿಕ್ಕಿಲ್ಲ. ಅಷ್ಟೊಂದು ತೃಪ್ತಿಕರವಾಗಿ ಕೇಂದ್ರ ಸರ್ಕಾರ ಈ ಬಗ್ಗೆ ಗಮನ ಹರಿಸಿಲ್ಲವೆಂದು ಹೇಳುತ್ತೇನೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಈಗಿರುವಂತಹ ರಸ್ತೆಗಳನ್ನು ಇಂಪ್ರೂವ್ ಸಲುವಾಗಿ ಮತ್ತು ಮೇಂಟೇನ್ ಸಲುವಾಗಿ ಕೇಂದ್ರ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಅನೇಕ ರಾಜ್ಯಗಳಿಗೆ ಕೊಡುತ್ತಿದೆ. ಇದರ ಒಂದು ಉಪಯೋಗವನ್ನು ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರಗಳು ಪಡೆದಂತೆ ನಮ್ಮ ರಾಜ್ಯವೂ ಪಡೆದಿದೆಯೇ ಹೇಗೆ ?

ಶ್ರೀ ಹೆಚ್. ಡಿ. ದೇವೇಗೌಡ.—ಈ ಬಾಬಿಗೆ ಅವರು ಕೊಟ್ಟ ಹಣವನ್ನು ಖರ್ಚು ಮಾಡಿರುವುದಲ್ಲದೆ ಇನ್ನೂ ಹೆಚ್ಚಿನ ಹಣ ಬೇಕೆಂದು ಕೇಳಿದ್ದೇವೆ. ಹೊಸ ರಸ್ತೆಗಳನ್ನು ತೆಗೆದುಕೊಳ್ಳುವ ಬಗ್ಗೆ ನಾವು ಅನೇಕ ಹಂತಗಳಲ್ಲಿ ಪತ್ರಗಳನ್ನು ಬರೆದಿದ್ದೇವೆ. ಮತ್ತು ಕೇಂದ್ರದ ಮಂತ್ರಿಗಳನ್ನು ನೋಡಿದ್ದೇವೆ. ಈಗಿನ ಒಂದು ನಿಯಮಾವಳಿ ಪ್ರಕಾರವೇ ಇಷ್ಟು ಹಣ ಕೊಡಬೇಕು, ಇಷ್ಟು ರಸ್ತೆಗಳು ಮತ್ತು ಸೇತುವೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಆದರೆ ನಮಗೆ ಹತ್ತು ಕೋಟಿ ರೂಪಾಯಿಗಳು ಮಾತ್ರ ಕೇಂದ್ರದಿಂದ ಬರುತ್ತಿರುವುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಳ್ಳಾರಿಯಿಂದ ಚಾಮರಾಜನಗರದವರೆಗೆ ಒಂದು ರಸ್ತೆಯನ್ನು ಪಾವಗಡ, ಕುಣಿಗಲ್, ಮಳವಳ್ಳಿ, ಮದ್ದೂರು, ಮಧುಗಿರಿ, ಮುಂತಾದ ರೇಷ್ಮೇ ಬೆಳೆಯತಕ್ಕಂಥ ಸ್ಥಳಗಳನ್ನು ಕೂಡಿಸಿ ಮಾಡಬೇಕೆಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿತ್ತು. ಆದ್ದರಿಂದ ಈ ಮಾರ್ಗ ಕೂಡ ತಾವು ಹೇಳಿದಂಥ ಪಟ್ಟಿಯಲ್ಲಿ ಸೇರಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ಈ ರಸ್ತೆಯನ್ನೂ ಕೂಡ ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ ಮಾಡಿದ್ದೇವೆ.

ಶ್ರೀ ಗೋವಿಂದ ಜಿ. ಒಡೆಯರಾಜ್.—6 ರಾಷ್ಟ್ರೀಯ ಹೆದ್ದಾರಿಗಳನ್ನು ತೆಗೆದುಕೊಳ್ಳುವ ಸಲುವಾಗಿ ಈ ಹಿಂದಿನ ಸರ್ಕಾರ ಕೇಂದ್ರಕ್ಕೆ ಬರೆದಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಹೈದರಾಬಾದ್ ಕರ್ನಾಟಕ ಭಾಗದಲ್ಲಿರುವಂತಹ 3 ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ರಾಷ್ಟ್ರೀಯ ಹೆದ್ದಾರಿಗಳು 9 ನೇ ನ್ಯಾಷನಲ್ ಹೈವೇ ಬಿಟ್ಟರೆ ಜಾಸ್ತಿ ಇಲ್ಲ. ಈ ಕಾರಣದಿಂದ ಈ 9 ನೇ ನ್ಯಾಷನಲ್ ಹೈವೇನಲ್ಲಿ ಬರುವಂತಹ ಹುಮ್ನಾಬಾದ್‌ನಿಂದ ಹಿರಿಯೂರು, ಸಿರಗುಪ್ಪ, ಬಳ್ಳಾರಿ, ಚಳ್ಳಕೆರೆ ಮಾರ್ಗವಾಗಿ ಒಂದು ರಸ್ತೆಯನ್ನು ಮಾಡಿ ನಾಲ್ಕನೇ ರಾಷ್ಟ್ರೀಯ ಹೆದ್ದಾರಿಗೆ ಸೇರಿಸಿದರೆ ಆಪ್ಪರ್-ಕೃಷ್ಣಾ, ತುಂಗಭದ್ರಾ ಅಚ್ಚುಕಟ್ಟು ಪ್ರದೇಶಗಳ ಜನರಿಗೆ

ಆರ್ಥಿಕವಾಗಿ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಇದಕ್ಕೆ ಹೆಚ್ಚಿನ ಮತ್ತು ಮೊದಲನೇ ಆದ್ಯತೆ ಕೊಟ್ಟು ಜಾಗ್ರತೆ ಇದನ್ನು ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಹೆಚ್. ಡಿ. ದೇವೇಗೌಡ.—ಈ ರಸ್ತೆಯೂ ಸಹ ರಾಜ್ಯ ಸರ್ಕಾರದ ಶಿಫಾರಸ್ ಪಟ್ಟಿಯಲ್ಲಿ ಸೇರಿದೆ. ಬೆಳಗಾಂ, ಬಿಜಾಪುರ, ಗುಲ್ಬರ್ಗಾ ಹಾಗೂ ಹುಮ್ನಾಬಾದ್ ರಸ್ತೆಯ ಬಗ್ಗೆ ಪ್ರಪೋಸಲ್ ಹೋಗಿದೆ. ಆದರೆ ತಾವು ಹೇಳಿದ ಪ್ರಕಾರ ಇದಕ್ಕೇ ಮೊದಲು, ಮೊದಲ ಆದ್ಯತೆ ಕೊಟ್ಟರೆ ಬೇರೆ ರಸ್ತೆಗಳ ಬಗ್ಗೆ ನಮ್ಮ ಸರ್ಕಾರಕ್ಕೆ ಅಷ್ಟು ಆಸಕ್ತಿ ಇಲ್ಲವೆಂಬ ಭಾವನೆ ಕೇಂದ್ರಕ್ಕೆ ಬರಬಹುದು. ಆದ್ದರಿಂದ ಈ 6 ರಸ್ತೆಗಳನ್ನೂ. ಸಹ ಒಟ್ಟಿಗೆ ತೆಗೆದುಕೊಳ್ಳಬೇಕೆಂದು ನಾವು ಒತ್ತಾಯ ಮಾಡಿದ್ದೇವೆ.

ಶ್ರೀ ಕೆ. ಮಲ್ಲಪ್ಪ.—ನಮ್ಮ ಭಾಗದಲ್ಲಿ ಬರುವಂತಹ ಸೇತುವೆಯ ದುರಸ್ತಿಯ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು ಮತ್ತು ರಸ್ತೆಗೆ ಅಡ್ಡವಾಗಿರುವ ಮರಗಳನ್ನು ಕಡಿಸುವ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳದಿದ್ದರೆ ನಾಳ್ಕನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳು ಓಡಾಡಲು ತೊಂದರೆ ಯಾಗುತ್ತದೆ. ಆದ್ದರಿಂದ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಆದೇಶ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಪಂಪಾಪತಿ.—ನಮ್ಮ ನಾಲ್ಕನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಎರಡು ರೈಲ್ವೇ ಲೆವೆಲ್ ಕ್ರಾಸಿಂಗ್ ಗಳು ಬರುವುದರಿಂದ ವಾಹನ ಸಂಚಾರಕ್ಕೆ ಮತ್ತು ಜನರ ಓಡಾಟಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಿರಿ. ಆದರೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ದಾವಣಗೆರೆ ಮತ್ತು ಹರಿಹರ ಮಾರ್ಗದಲ್ಲಿ ಬೈ-ಪಾಸ್ ರೋಡ್ ಮಾಡಬೇಕು ಎಂಬುದು ಅವರ ಉದ್ದೇಶವಾಗಿದೆ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ವಿಷಯ: ಬಳ್ಳಾರಿ ಜಿಲ್ಲೆಯಲ್ಲಿ ಐದನೆಯ ನೀರಾವರಿ ಯೋಜನೆ.

ಪ್ರ. 274 (94) ಶ್ರೀ ಕೆ. ಚೆನ್ನಬಸವನಗೌಡ,—(ಕೂಡ್ಲಗಿ) ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

ಬಳ್ಳಾರಿ ಜಿಲ್ಲಾ ಹಗರಿಬೊಮ್ಮನಹಳ್ಳಿ ತಾಲ್ಲೂಕು ತಂಬ್ರಹಳ್ಳಿ ಏತ ಯೋಜನೆಯ ಕಾಲುವೆ ಮತ್ತು ಪಕ್ಕದ [ರಸ್ತೆಗಳಿಗೋಸ್ಕರ ಬೇಕಾಗಿರುವ ಜಮೀನುಗಳನ್ನು ಸರ್ಕಾರ ವಶಪಡಿಸಿಕೊಂಡು 10 ವರ್ಷ ಗಳಾದರೂ ಸಹ ಪರಿಹಾರ ಧನ ಕೊಡದೇ ಇರುವುದಕ್ಕೆ ಕಾರಣ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಮೇಲಿನ ಯೋಜನೆಯ ಮೊದಲನೆ ಹಂತದ ಕಾಲುವೆ ಹಾಗೂ ರಸ್ತೆಗಳಿಗೋಸ್ಕರವಾಗಿ ಬೇಕಾಗಿದ್ದ 7 ಎಕರೆ 59 ಸೆಂಟು ಜಮೀನಿಗೆ ಕೊಡಬೇಕಾದ ಪರಿಹಾರ ಧನದ ಕೊನೆಯ ನಿರ್ಣಯವನ್ನು ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ದಿನಾಂಕ: 30–10–1972 ರಲ್ಲಿ ಒಟ್ಟುರೂ. 10,474–20 ಗೆ ನಿಗದಿಪಡಿಸಿ ಅದರಂತೆ 7–12–1972 ರಂದು ಭೂ ಮಾಲೀಕರಿಗೆ ಪರಿಹಾರಧನವನ್ನು ವಿತರಣೆ ಮಾಡಲಾಗಿದೆ.

ಇದೇ ಯೋಜನೆಯ ಎರಡನೆಯ ಹಂತದ ರಿಡ್ಜ್ ಕಾಲುವೆಗೋಸ್ಕರ 2.36 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಭೂಸ್ವಾಧೀನ ಕಾಯಿದೆಯ 4 (1) ರ ಪ್ರಕಾರ 14–10–1982 ರ ಗೆಜೆಟ್‌ನಲ್ಲಿ ಪ್ರಕಟಣೆ ಯಾಗಿರುತ್ತದೆ. ಅವಾರ್ಡು ಮಂಜೂರಾದ ಕೂಡಲೇ ಭೂ ಪರಿಹಹಾರದ ಹಣ ಕೊಡಲಾಗುವುದು.

ಶ್ರೀ ಕೆ. ಚೆನ್ನಬಸವನಗೌಡ.—ಈಗ ನನಗೆ ತಿಳಿದಂತೆ ಪಂಪ್-ಹೌಸ್ ಹಾಗೂ ಸ್ಟೋರೇಜ್ ಟ್ಯಾಂಕ್ ಗಳಿಗೆ ಸಂಬಂಧಪಟ್ಟಂತೆ ವಶಪಡಿಸಿಕೊಂಡಿರುವ ಜಮೀನಿಗೆ ಪರಿಹಾರ ಕೊಟ್ಟು ರಸ್ತೆಗಳಿಗೆ ಸಂಬಂಧಪಟ್ಟಂತೆ ವಶಪಡಿಸಿಕೊಂಡಿರುವ ಜಮೀನಿಗೆ ಪರಿಹಾರ ಕೊಟ್ಟಿಲ್ಲ. ಈ ಬಗ್ಗೆ ರೈತರಿಂದ ದೂರುಗಳು ಸರ್ಕಾರಕ್ಕೆ ಬಂದಿಲ್ಲವೇ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಮೊದಲನೆಯ ಹಂತದ ಕೆಲಸಕ್ಕೆ ಸಂಬಂಧಪಟ್ಟಂತೆ ಜಮೀನು ಸರ್ಕಾರದ ಸುಪರ್ದಿಗೆ ಬಂದಿದೆ. ಇದಕ್ಕೆ ಪರಿಹಾರದ ಹಣವನ್ನು ಕೊಟ್ಟಿದ್ದೇವೆ. ಇನ್ನು ಎರಡನೆಯ ಹಂತದ ಕೆಲಸಕ್ಕೆ ಬೇಕಾದ ಜಮೀನು ಇನ್ನು ಸರ್ಕಾರದ ಸುಪರ್ದಿಗೆ ಬಂದಿಲ್ಲ. ಈ ಬಗ್ಗೆ ಭೂ ಸ್ವಾಧೀನ ಕಾಯಿದೆಯ 4 (1) ರ ಪ್ರಕಾರ ನೋಟಿಫಿಕೇಷನ್ ಪ್ರಕಟಣೆಯಾಗಿದೆ. ಫೈನಲ್ ನೋಟಿಫಿಕೇಷನ್ ಆದ ನಂತರ ಜಮೀನು ನಮ್ಮ ಸುಪರ್ದಿಗೆ ಬರುತ್ತದೆ. ಆಗ ಹಣವನ್ನು ಕೊಡುತ್ತೇವೆ.

ವಿಷಯ: ಹೊಸದುರ್ಗ ತಾಲ್ಲೂಕಿನಲ್ಲಿ ಸಣ್ಣ ಕೆರೆಗಳನ್ನು ನಿರ್ಮಿಸುವುದು.

ಪ್ರ. 275 (102) ಶ್ರೀ ಜಿ. ಬಸಪ್ಪ (ಹೊಸದುರ್ಗ).— ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ರಾಜ್ಯ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಹೊಸದುರ್ಗ ತಾಲ್ಲೂಕು ಪದೇ ಪದೇ ಅಭಾವಕ್ಕೆ ಗುರಿಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;